ಹೂವಿನ ಬೆಳೆ

987 (1104) ಶ್ರೀ ಜಯಚಂದ್ರ ಟಿ.ಬಿ. (ಶಿರಾ) : ಮಾನ್ಯ ತೋಟಗಾರಿಕೆ ಮತ್ತು ಬಂಧೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕು ಚಿಕ್ಕನಹಳ್ಳಿ ಗ್ರಾಮದಲ್ಲಿ ಆರ್.ಕೆ.ವಿ.ವೈ ಯೋಜನೆಯಲ್ಲಿ ಹೂವಿನ ಮಾರುಕಟ್ಟೆ ಮಂಜೂರಾಗಿದ್ದು, ಈ ಮಾರುಕಟ್ಟೆಯ ಅಭಿವೃದ್ಧಿಗೆ ತೋಟಗಾರಿಕೆ ಇಲಾಖೆಯಿಂದ ಹೊಸ ತಂತ್ರಜ್ಞಾನ ಅಳವಡಿಸಿ ಹೆಚ್ಚಿನ ಪ್ರದೇಶಗಳಲ್ಲಿ ರಫ್ತು ಮಾಡುವ ಹೊಸ ಹೊಸ ತಳಿಗಳ ಹೂವು ಬೆಳೆಯಲು ಹಾಗೂ ಹೂವಿನ ಬೆಳೆಗಾರರನ್ನು ಉತ್ತೇಜಿಸಲು ಹೆಚ್ಚಿನ ಸಹಾಯಧನ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ;

ಆ) ಚಿಕ್ಕನಹಳ್ಳಿ ಶ್ರೀ ಉಗ್ರೇಗೌಡರ ಸ್ಮಾರಕ ಸರ್ಕಾರಿ ಕೃಷಿ ಫಾರಂನಲ್ಲಿ ತೋಟಗಾರಿಕೆ ಉದ್ದೇಶಕ್ಕೆ ಮೀಸಲಿಟ್ಟ ಜಮೀನಿನಲ್ಲಿ ಹೂವಿನ ಬೆಳೆಗಳ ನರ್ಸರಿ ಕೇಂದ್ರ ಸ್ಥಾಪಿಸಿ, ಇಲ್ಲಿನ ಜಿಲ್ಲಾ ರೈತರ ತರಬೇತಿ ಕೇಂದ್ರದಲ್ಲಿ ಹೂವಿನ ಬೇಸಾಯದ ನಗ್ಗೆ ಈ ಸಾಲಿನಿಂದಲೇ ಪ್ರಾಯೋಗಿಕ ತರಬೇತಿ ನೀಡಲು ಕ್ರಮ ಕೈಗೊಳ್ಳುವರೇ;

ಇ) ಚಿಕ್ಕನಹಳ್ಳಿ ಈ ಕೃಷಿ ಫಾರಂನಲ್ಲಿ ಎಲ್ಲಾ ಮೂಲಭೂತ ಸೌಕರ್ಯವಿರುವುದರಿಂದ, ಪ್ರಸಕ್ತ ಸಾಲಿನಿಂದಲೇ ತೋಟಗಾರಿಕೆ ಡಿಪ್ಲೋಮೋ ಕೋರ್ಸ್‌ಗೆ ಮಂಜೂರಾತಿ ನೀಡಿ, ಇಲ್ಲಿನ ನಿರುದ್ಯೋಗ ಯುವಕ-ಯುವತಿಯವರಿಗೆ ಪುಸ್ಪೋದ್ಯಮದ ಬಗ್ಗೆ ತರಬೇತಿ ನೀಡಿ, ಸ್ವ- ಉದ್ಯೋಗ ಹೊಂದಲು ಕ್ರಮ ಕೈಗೊಳ್ಳಲಾಗುವುದೇ;

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧೀಖಾನೆ ಸಚಿವರು) :

ಅ) ಹೌದು.

ಆ) ಸದ್ಯಕ್ಕೆ ಇಂತಹ ಪ್ರಸ್ತಾವನೆ ಇರುವುದಿಲ್ಲ.

ಇ) ಮೇಲಿನಂತೆ.